**(ಇಂದು ದಿನಾಂಕಃ 18-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಬೋಧಿಸಲಾಯಿತು)**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ಬಂಗಾರೆವ್ವಾ ರಾಮಗೌಡ ಕೊಕಟನೂರ ನನ್ನ ತಾಯಿ. ವಾದ ಪತ್ರದಲ್ಲಿ ನನ್ನ ತಂದೆಯ ಹೆಸರು ಕೇವಲ ರಾಮಪ್ಪಾ ಎಂದು ಬರೆಯಿಸಿದ್ದೇ ಎಂದರೆ ಸರಿ. ಬಂಗಾರೆವ್ವಾ ರವರ ವಾರಸಾ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸದರಿ ವಾರಸಾ ಪ್ರಮಾಣ ಪತ್ರದಲ್ಲಿ ನನ್ನ ತಂದೆಯ ರಾಮಗೌಡ ಎಂದು ಬರೆಯಿಸಿದ್ದೇನೆ. ನಿಪಿ-4 ರಲ್ಲಿ ಆದೇಶದಲ್ಲಿ ಕಚ್ಚಾ ನಕಾಶೆಯನ್ನು (Hand sketch map) ಎಂದು ಬರೆಯಲಾಗಿದೆ ಎಂದರೆ ಸರಿ.

2) ನಿಪಿ-4 ರಲ್ಲಿ ಹೇಳಲಾದ ಕಚ್ಚಾ ನಕಾಶೆಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೇನೆ. ನಿಪಿ-4 ರಲ್ಲಿ 2 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಚಕಬಂದಿ ನಮೂದು ಇರುವುದಿಲ್ಲಾ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಚಕಬಂದಿಯನ್ನು ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ವಾದ ಪತ್ರದ ಶೆಡ್ಯೂಲ-ಎ ನಲ್ಲಿ ದಾವಾ ಆಸ್ತಿಯ ಚಕಬಂದಿ ನಮೂದಿಸಿಲ್ಲಾ ಎಂದರೆ ಸರಿ, ಸಾಕ್ಷಿಯು ಮುಂದುವರೆದು ನಾನು ಚಕಬಂದಿಯನ್ನು ಕೊಟ್ಟಿರುತ್ತೇನೆ ಎನ್ನುತ್ತಾರೆ. ಶೆಡ್ಯೂಲ-ಎ ನಲ್ಲಿ ಚಕಬಂದಿಯನ್ನು ನಮೂದಿಸಲು ನನಗೆ ತೊಂದರೆ ಇರಲಿಲ್ಲಾ ಎಂದರೆ ಸರಿ.

3) ನಿಪಿ-4 ರಲ್ಲಿ ದಾವಾ ಆಸ್ತಿಯ ವಿಸ್ತೀರ್ಣ (ಪೂರ್ವ-ಪಶ್ಚಿಮ, ಉತ್ತರ-ದಕ್ಷಿಣ) ನಮೂದಿಸಿಲ್ಲಾ ಎಂದರೆ ಸರಿ ಸಾಕ್ಷಿ ಮುಂದುವರೆದು ನಾನು ಪಂಚಾಯತಿಯಿಂದ ದಾಖಲೆಯನ್ನು ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ದಾವಾ ಆಸ್ತಿಯ ವಿಸ್ತೀರ್ಣ ಪೂರ್ವ-ಪಶ್ಚಿಮ 66 ಪೂಟ, ಉತ್ತರ-ದಕ್ಷಿಣ 33 ಪೂಟ ಎಂದು ತೋರಿಸಲು ಪಂಚಾಯತಿಯಲ್ಲಿ ಯಾವ ದಾಖಲೆಯಲ್ಲಿ ಇದೆ ಎಂದರೆ ಸಾಕ್ಷಿಯು 1984 ರಲ್ಲಿ ಪಂಚಾಯತಿ ಕಾರ್ಯಾಲಯದವರು ಠರಾವು ಹೊರಡಿಸಿ ದಾವಾ ಆಸ್ತಿಯನ್ನು ನನಗೆ ಕೊಟ್ಟಿರುತ್ತಾರೆ ಎನ್ನುತ್ತಾರೆ.

4) ಪಂಚಾಯತಿ ಕಾರ್ಯಾಲಯದವರು ಯಾವ ಆಧಾರದ ಮೇಲೆ ಹಾಗೂ ಯಾವ ದಾಖಲೆಗಳನ್ನು ಪರಿಶೀಲಿಸಿ ದಾವಾ ಆಸ್ತಿ ವಿಸ್ತೀರ್ಣ ಪೂರ್ವ- ಪಶ್ಚಿಮ 66 ಪೂಟ ಉತ್ತರ – ದಕ್ಷಿಣ 33 ಪೂಟ ಎಂದು ನಿರ್ದರಿಸಿ ನಿಮ್ಮ ಹೆಸರಿಗೆ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ತಹಶೀಲ್ದಾರ ರವರ ಆದೇಶದ ಮೇರೆಗೆ ನನಗೆ ಕೊಟ್ಟಿರುತ್ತಾರೆ ಎನ್ನುತ್ತಾರೆ. ಶಹಶೀಲ್ದಾರ ರವರ ಆದೇಶದಲ್ಲೆ ದಾವಾ ಆಸ್ತಿಯ ವಿಸ್ತೀರ್ಣ ಪೂರ್ವ- ಪಶ್ಚಿಮ 66 ಪೂಟ ಉತ್ತರ – ದಕ್ಷಿಣ 33 ಪೂಟ ಎಂದು ನಮೂದಿಸಿಲ್ಲಾ ಎಂದರೆ ಸರಿ.

5) ಪ್ರತಿವಾದಿರವರು ಪೂರ್ವದಲ್ಲಿ ಆಸ್ತಿ ಸಂಃ 378 ನ್ನು ಖರೀದಿಸಿದ್ದರು ಎಂದರೆ ಸರಿ. ಸದರಿ ಆಸ್ತಿಯ ಸಂಖ್ಯೆಯು ಈಗ 128 ಆಗಿದೆ ಎಂದರೆ ಸರಿಯಲ್ಲ. ವಾದ ಪತ್ರದ ಜೊತೆಗೆ ಲಗತ್ತಿಸಿದ ಕಚ್ಚಾ ನಕಾಶೆಯಲ್ಲಿ ದಕ್ಷಿಣ ದಿಕ್ಕಿಗೆ ಆಸ್ತಿ ಸಂಃ 128 ಎಂದು ತೋರಿಸಲಾಗಿದೆ ಎಂದರೆ ಸರಿ. ಸದರಿ ಆಸ್ತಿ ಸಂಃ 128 ಪ್ರತಿವಾದಿ ರವರಿಗೆ ಸಂಬಂಧಸಿದೆ ಎಂದರೆ ಸರಿ.

6) ಗ್ರಾಮ ಪಂಚಾಯತಿ ಆಸ್ತಿ ಸಂಃ 378 ಈ ಮೊದಲು ವಿಷ್ಣು ಅಣ್ಣಾಜಿ ಕುಲಕರ್ಣಿ ಹಾಗೂ ಕೃಷ್ಣಾಜಿ ಅಣ್ಣಾಜಿ ಕುಲಕರ್ಣಿ ರವರಿಗೆ ಸಂಬಂಧಿಸಿತ್ತು ಎಂದರೆ ಸರಿ. ಪ್ರತಿವಾದಿಯ ತಂದೆ ಇಸ್ಮಾಯಿಲ್ ಶಿರೋಳ ರವರು ಸದರಿ ಗ್ರಾಮ ಪಂಚಾಯತಿ ಆಸ್ತಿ ಸಂಃ 378 ನ್ನು ದಿಃ 01-06-1981 ರಂದು ಖರೀದಿಸಿದ್ದಾರೆ ಎಂದರೆ ಸರಿ. ಸದರಿ ಖರೀದಿ ಪತ್ರದ ಪ್ರಕಾರ ಪ್ರತಿವಾದಿಯ ತಂದೆಯ ಹೆಸರು ಆಸ್ತಿ ಸಂಃ 378 ರ ಸಂಬಂಧಪಟ್ಟ ಕಂದಾಯ ದಾಖಲೆಗಳಲ್ಲಿ ನಮೂದು ಆಗಿತ್ತು ಎಂದರೆ ಸರಿ.

7) ಇಸ್ಮಾಯಿಲ್ ಶಿರೋಳ ಮೃತಪಟ್ಟ ನಂತರ ಆಸ್ತಿ ಸಂಃ 378 ಕ್ಕೆ ಸಂಬಂಧಿಸಿದಂತೆ ಸದರಿ ಇಸ್ಮಾಯಿಲ್ ರವರ ಹೆಂಡತಿ ಹಾಗೂ ಮಕ್ಕಳ ಹೆಸರು ಕಂದಾಯ ದಾಖಲೆಗಳಲ್ಲಿ ನಮೂದು ಆಗಿರುತ್ತದೆ ಎಂದರೆ ಸರಿ. ಪ್ರತಿವಾದಿಯ ತಂದೆ ಖರೀದಿಸಿದ ಆಸ್ತಿ ಸಂಃ 378 ರ ಖರೀದಿ ಪತ್ರದಲ್ಲಿ ಸದರಿ ಜಾಗೆಯ ವಿಸ್ತೀರ್ಣ ಪೂರ್ವ – ಪಶ್ಚಿಮ 18 ಪೂಟ, ಉತ್ತರ – ದಕ್ಷಿಣ 80 ಪೂಟ ನಮೂದು ಇದೆ

ಎಂದರೆ ಸರಿ ಸಾಕ್ಷಿ ಮುಂದುವರೆದು ಪ್ರತಿವಾದಿರವರ ಜಾಗೆಯು ಕೇವಲ 18 ಫೂಟ x 25 ಫೂಟ ಇದೆ ಎನ್ನುತ್ತಾರೆ. ಪ್ರತಿವಾದಿ ರವರಿಗೆ ಕೇವಲ 18 x 25 ಫೂಟ ಜಾಗೆ ಇದೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ.

8) 1981 ರಲ್ಲಿ ಪ್ರತಿವಾದಿ ರವರ ತಂದೆ ಖರೀದಿಸಿದ ಆಸ್ತಿ ಸಂಃ 378 ಈ ಆಸ್ತಿಯು 2 ವರ್ಷಗಳ ನಂತರ ನನ್ನ ತಾಯಿಯ ಹೆಸರಿಗೆ ಮಂಜೂರು ಆಗಿರುತ್ತದೆ. ಸಾಕ್ಷಿ ಮುಂದುವರೆದು ಸದರಿ ಜಾಗೆಯು ಗ್ರಾಮಠಾಣಾ ಜಾಗೆ ಇತ್ತು ಎನ್ನುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಿ ಮುಂದೂಡಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

( Abhinay )
C/c II Addl. CJ & JMFC, Gokak